ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳು

5129 (5848); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ನಿಗಮ ಮತ್ತು ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಿಸಿದ, ಕೊರೆಯದ ಫಲಾನುಭವಿಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);

ಇ) ಕಳೆದ ಮೂರು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಅಳವಡಿಸಿರುವ ಮತ್ತು ಪಂಪು ಮೋಟಾರು ಅಳವಡಿಸಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಈ) ಉಳಿದ ಫಲಾನುಭವಿಗಳ ಕೊಳವೆ ಬಾವಿಗಳಿಗೆ ಯಾವ ಕಾಲಮಿತಿಯೊಳಗೆ ವಿದ್ಯುತ್ ಸಂಪರ್ಕ ಮತ್ತು ಪಂಪು ಮೋಟಾರು ಅಳವಡಿಸಲಾಗುತ್ತದೆ (ವಿವರ ನೀಡುವುದು)?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ)

ವಿಧಾನ ಸಭಾ ಕ್ಷೇತ್ರ	ಡಾ॥ ಬಿ.ಆರ್.ಅಂ.ಅ.ನಿ	ಕ.ಮ.ವಾ.ಪ.ಪಂ.ಅ.ನಿ	ಹಿಂ.ವ.ಅ.ನಿ.
ಚಿಕ್ಕಬಳ್ಳಾಪುರ	121	71	42
ಗೌರಿಬಿದನೂರು	164	154	67
ಶಿಡ್ಲಘಟ್ಟ	105	93	48
ಚಿಂತಾಮಣಿ	158	111	54
ಬಾಗೇಪಲ್ಲಿ	119	134	50
ಒಟ್ಟು	667	563	261

ಆ) ವಿವರಗಳು ಈ ಕೆಳಕಂಡಂತಿರುತ್ತವೆ.

ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

ಕ್ರ ಸಂ	ವಿಧಾನಸಭಾ ಕ್ಷೇತ್ರ	2012-13		2013-14		2014-15	
		ಕೊರಸಿದ ಕೊಳವೆ ಬಾವಿಗಳು	ಕೊರೆಯದ ಕೊಳವೆ ಬಾವಿಗಳು	ಕೊರೆಸಿದ ಕೊಳವೆ ಬಾವಿಗಳು	ಕೊರೆಯದ ಕೊಳವೆ ಬಾವಿಗಳು	ಕೊರೆಸಿದ ಕೊಳವೆ ಬಾವಿಗಳು	ಕೊರೆಯದ ಕೊಳವೆ ಬಾವಿಗಳು
1	ಚಿಕ್ಕಬಳ್ಳಾಪುರ	52	0	0	27	0	42
2	ಗೌರಿಬಿದನೂರು	70	0	20	16	23	35
3	ಶಿಡ್ಲಘಟ್ಟ	27	18	0	23	0	37
4	ಚಿಂತಾಮಣಿ	32	35	10	25	10	46
5	ಬಾಗೇಪಲ್ಲಿ	29	28	0	32	0	50
	ಒಟ್ಟು	210	81	30	123	33	210

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ವಿಧಾನ ಸಭಾ ಕ್ಷೇತ್ರ	2012–13				2013–14				2014–15			
	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಗುರಿ	ಕೊರಯಿಸಿದ ಕೊಳವೆಬಾವಿಗಳ ಸಂಖ್ಯೆ	ಕೊರೆಯಲು ಬಾಕಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಗುರಿ	ಕೊರೆಯಿಸಿದ ಕೊಳವೆಬಾವಿಗಳ ಸಂಖ್ಯೆ	ಕೊರೆಯಲು ಬಾಕಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಗುರಿ	ಕೊರೆಯಿಸಿದ ಕೊಳವೆಬಾವಿಗಳ ಸಂಖ್ಯೆ	ಕೊರೆಯಲು ಬಾಕಿ
ಬಾಗೇಪಲ್ಲಿ	48	44	43	1	33	29	0	29	53	44	0	44
ಶಿಡ್ಲಘಟ್ಟ	34	20	20	0	26	13	2	11	33	22	2	20
ಚಿಂತಾಮಣಿ	35	35	27	8	35	23	6	17	41	34	4	32
ಚಿಕ್ಕಬಳ್ಳಾಪುರ	17	14	14	0	23	14	0	14	31	22	0	22
ಗೌರಿಬಿದನೂರು	60	51	51	0	44	33	29	4	50	46	32	16
ಒಟ್ಟು	194	164	155	9	161	112	37	75	208	168	38	134

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:

ಕ್ರ ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	ಮಂಜೂರಾದ ಕೊಳವೆ ಬಾವಿಗಳು	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ಕೊರೆಯಲು ಬಾಕಿ
1	ಚಿಕ್ಕಬಳ್ಳಾಪುರ	37	16	21
2	ಶಿಡ್ಲಘಟ್ಟ	45	34	11
3	ಬಾಗೇಪಲ್ಲಿ	44	31	13
4	ಚಿಂತಾಮಣಿ	49	35	14
5	ಗೌರಿಬಿದನೂರು	61	37	24
	ಒಟ್ಟು	**236**	**153**	**83**

ಇ) ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟವು 1000 ಅಡಿಗೂ ಕೆಳಕ್ಕೆ ಕುಸಿದಿರುವುದರಿಂದ, 2012–13ನೇ ಸಾಲಿನ ಕೊಳವೆಬಾವಿಗಳನ್ನು ಘಟಕ ವೆಚ್ಚ ರೂ 1.50 ಲಕ್ಷದ ಮಿತಿಯೊಳಗೆ ಕೊರೆಯಲಾಗಿದೆ. 2013–14ರಿಂದ ಘಟಕ ವೆಚ್ಚವನ್ನು ರೂ 2.00 ಲಕ್ಷಕ್ಕೆ ಹೆಚ್ಚಿಸಿದ್ದು, ಘಟಕ ವೆಚ್ಚದೊಳಗೆ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ 273 ಕೊಳವೆಬಾವಿಗಳನ್ನು ಘಟಕ ವೆಚ್ಚದೊಳಗೆ ಕೊರೆಯಲಾಗಿದೆ. ಅವಧಿಸಾಲ ಪಡೆಯಲು ಜಮೀನು ಅಡಮಾನ ಮಾಡಿದ 09 ಫಲಾನುಭವಿಗಳಿಗೆ ಅವಧಿಸಾಲ ಮಂಜೂರು ಮಾಡಿ ಪಂಪ್‌ಸೆಟ್ ಸರಬರಾಜು ಮಾಡಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ. ಉಳಿದ ಫಲಾನುಭವಿಗಳು ಸ್ವಂತವಾಗಿ ಪಂಪ್‌ಸೆಟ್ ಅಳವಡಿಸಿರುತ್ತಾರೆ. ಕೊರೆದ ಕೊಳವೆಬಾವಿಗಳಿಗೆ ಬೆಸ್ಕಾಂನಲ್ಲಿ ಅರ್ಜಿ ನ್ಯೋಂದಣಿ ಮಾಡಿಸಿ, ವೈ.ಎಂ.ಡಿ. ಪಾವತಿಸಿ, ಸಿ.ಆರ್. ಅಗ್ರಿಮೆಂಟ್ ಸಲ್ಲಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಜರುಗಿಸಲಾಗುತ್ತಿದೆ. ಕೊರೆದಿರುವ ಕೊಳವೆ ಬಾವಿಗಳಲ್ಲಿ 35 ಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ವಿಧಾನ ಸಭಾ ಕ್ಷೇತ್ರ	2012–13		2013–14		2014–15	
	ಪಂಪ್ ಸೆಟ್ ಸರಬರಾಜು ಮಾಡಿದ ಕೊಳವೆಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಲಾದ ಕೊಳವೆಬಾವಿಗಳ ಸಂಖ್ಯೆ	ಪಂಪ್ ಸೆಟ್ ಸರಬರಾಜು ಮಾಡಿದ ಕೊಳವೆಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಲಾದ ಕೊಳವೆಬಾವಿಗಳ ಸಂಖ್ಯೆ	ಪಂಪ್ ಸೆಟ್ ಸರಬರಾಜು ಮಾಡಿದ ಕೊಳವೆಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಲಾದ ಕೊಳವೆಬಾವಿಗಳ ಸಂಖ್ಯೆ
ಬಾಗೇಪಲ್ಲಿ	3	13	0	0	0	0
ಶಿಡ್ಲಘಟ್ಟ	0	7	0	0	0	0
ಚಿಂತಾಮಣಿ	1	11	0	0	0	0
ಚಿಕ್ಕಬಳ್ಳಾಪುರ	0	6	0	0	0	0
ಗೌರಿಬಿದನೂರು	31	24	0	0	0	0
ಒಟ್ಟು	35	61	0	0	0	0

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ: ಕಳೆದ ಮೂರು ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ಪೈಕಿ 50 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 4 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಒದಗಿಸಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್ಚಿನ ಆಳದ ವರೆಗೆ ಕೊಳವೆ ಬಾವಿಗಳನ್ನು ಕೊರೆಯಿಸಬೇಕಾಗಿರುವುದರಿಂದ ನಿಗದಿತ ಘಟಕ ವೆಚ್ಚದ ಮೊತ್ತದಲ್ಲಿ ಹೆಚ್ಚಿನ ಹಣ ಕೊಳವೆ ಬಾವಿ ಕೊರೆಯಲು ವೆಚ್ಚವಾಗುತ್ತಿದೆ.

ಉಳಿದ ಕೊಳವೆ ಬಾವಿಗಳಿಗೆ ನಿಗದಿತ ಘಟಕ ವೆಚ್ಚದಲ್ಲಿ ಹಣದ ಕೊರತೆಯಿಂದಾಗಿ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಒದಗಿಸಿರುವುದಿಲ್ಲ.

ಈ) ಕೊಳವೆಬಾವಿ ಕೊರೆಸಿದ ಬಳಿಕ ಪಂಪ್‌ಸೆಟ್ ಅಳವಡಿಸಲು ಅವಧಿಸಾಲ ಮಂಜೂರಾತಿಗಾಗಿ ಜಮೀನು ಆಧಾರ ಮಾಡಿಕೊಟ್ಟಿರುವ ಫಲಾನುಭವಿಗಳ ಕೊಳವೆಬಾವಿಗಳಿಗೆ ಪಂಪ್‌ಸೆಟ್ ಸರಬರಾಜು ಮಾಡಲು ಗುತ್ತಿಗೆದಾರ ಕಂಪನಿಗೆ ಕಾರ್ಯಾದೇಶ ನೀಡಲಾಗಿದೆ. ಸಾಲ ಪಡೆಯಲು ಬಯಸದೇ ಇರುವ ಫಲಾನುಭವಿಗಳು ಸ್ವಂತವಾಗಿ ಪಂಪ್‌ಸೆಟ್ ಅಳವಡಿಸಿಕೊಂಡಿರುತ್ತಾರೆ.

ಕೊರೆದ ಎಲ್ಲಾ ಕೊಳವೆಬಾವಿಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ಬೆಸ್ಕಾಂನಲ್ಲಿ ಅರ್ಜಿ ನೋಂದಾಯಿಸಿ, ವೈ.ಎಂ.ಡಿ. ಮತ್ತು ಮೀಟರ್ ಸೆಕ್ಯೂರಿಟಿ ಡಿಫಾಸಿಟ್ ಪಾವತಿಸಲಾಗುತ್ತಿದೆ. ವಿದ್ಯುದ್ದೀಕರಣದ ಕಾಮಗಾರಿಯನ್ನು ಬೆಸ್ಕಾಂ ಅಧಿಕಾರಿಗಳು ನಿರ್ವಹಿಸುತ್ತಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಕನ್ನಡ ಮತ್ತು ಸಾಂಸ್ಕೃತಿಕ ಭವನಗಳು

5130 (5849); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಮಂಜೂರು ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಭವನಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ಸರ್ಕಾರದ ಘೋಷಣೆಯಂತೆ ಹೋಬಳಿಗೊಂದು ಸಂಸ್ಕೃತಿ ಭವನ ಮಂಜೂರು ಯೋಜನೆಯು ಯಾವ ಹಂತದಲ್ಲಿದೆ? (ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಭವನ ನಿರ್ಮಾಣ ಮಾಡಲು ಕೈಗೊಳ್ಳಲಾದ ಕ್ರಮಗಳೇನು? (ವಿವರ ನೀಡುವುದು)

ಈ) ಯಾವ ಕಾಲಮಿತಿಯೊಳಗೆ ಚಿಂತಾಮಣಿ ನಗರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಭವನ ನಿರ್ಮಾಣ ಮಾಡಲಾಗುವುದು (ವಿವರ ನೀಡುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಚಿಂತಾಮಣಿ ತಾಲೂಕಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಭವನಗಳು–3 ಇರುತ್ತವೆ.

1) ಸಾಂಸ್ಕೃತಿಕ ಭವನ– ಟಿ. ಗೊಲ್ಲಹಳ್ಳಿ ಚಿಂತಾಮಣಿ ತಾ॥.